KATK010061712023

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.

**S.C. 135/2023**

**ಫಿರ್ಯಾದುದಾರಃ** ರಾಜ್ಯ ಸರ್ಕಾರದ ಪರವಾಗಿ
ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರುಃ** 1) ಶಿವಣ್ಣ ಬಿನ್ ಲೇಟ್ ಪುಟ್ಟಯ್ಯ.ಆರ್. 65 ವರ್ಷ,

2) ಪಾರ್ವತಮ್ಮ ಕೋಂ ಶಿವಣ್ಣ, 42 ವರ್ಷ,

3) ಭರತ್ ಕುಮಾರ್ ಬಿನ್ ಶಿವಣ್ಣ, 25 ವರ್ಷ ,

(1 ರಿಂದ 3 ನೇ ಆರೋಪಿಗಳು ನಾಗೇಶ್ ರವರ ಬಾಡಿಗೆ ಮನೆ, ಅಂತರಸನಹಳ್ಳಿ , ತುಮಕೂರಿನ ವಾಸಿಗಳು)

## ದೋಷಾರೋಪಣೆ

ನಾಗಿರೆಡ್ಡಿ.ಎ, 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ದಿನಾಂಕ 10.06.2018 ರಂದು ಸಂಜೆ 7.30 ಗಂಟೆಗೆ ಅಂತರಸನಹಳ್ಳಿಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಹಿಂಬದಿಯಲ್ಲಿ ವಾಸವಾಗಿರುವ ನಾಗೇಶ್ ರವರ ಮನೆಯಲ್ಲಿ ಚಾಸಾ.1 ಮತ್ತು 2 ರವರು ಕೆಳ ಅಂತಸ್ತಿನಲ್ಲಿ ಹಾಗೂ ಆರೋಪಿತರಾದ ನೀವು ಮೇಲಂತಸ್ತಿನಲ್ಲಿ ಒಂದೇ ಬಿಲ್ಡಿಂಗ್ ನಲ್ಲಿ ವಾಸ ಮಾಡುತ್ತಿದ್ದು, 2 ನೇ ಆರೋಪಿಯಾದ ನೀವು ನೆಲ ತೊಳೆದು ನೀರನ್ನು ಬಾಗಿಲ ಮುಂದೆ ಚೆಲ್ಲಿದ ನೀರು ಚಾಸಾ.1 ರವರು ವಾಸವಿರುವ ಮನೆಯ ಮುಂಬಾಗಿಲಿನ ಮುಂದೆ ಹೋದ ವಿಚಾರದಲ್ಲಿ 1 ಮತ್ತು 2 ನೇ ಆರೋಪಿತರಾದ ನಿಮ್ಮನ್ನು ಕೇಳಿದಾಗ, 2 ನೇ ಆರೋಪಿಯಾದ ನೀವು ಚಾಸಾ.1 ರವರಿಗೆ ಸೂಳೇ ಮುಂಡೆ, ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ, 1 ರಿಂದ 3 ನೇ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಚಾಸಾ.1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ನೋವುಂಟುಮಾಡಿರುತ್ತೀರಿ, 2 ನೇ ಆರೋಪಿಯಾದ ನೀವು ಚಾಸಾ.1 ರವರ ಬಲಗೈ ತೋಳಿನ ಜಾಕೀಟನ್ನು ಹಿಡಿದು ಎಳೆದು ಹರಿದುಹಾಕಿದ್ದು, 1 ನೇ ಆರೋಪಿಯಾದ ನೀವು ಚಾಸಾ.2 ರವರ ಎಡಗೈ ಉಂಗುರದ ಬೆರಳನ್ನು ಹಿಡಿದು ತಿರುಚಿ ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತೀರಿ. ಆದ್ದರಿಂದ, 1 ರಿಂದ 3 ನೇ ಆರೋಪಿತರಾದ ನೀವು ಭಾ.ದಂ.ಸಂ.323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 3 ನೇ ಆರೋಪಿಯಾದ ನೀವು ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಚಾಸಾ.1 ರವರ ಎಡಗೈಗೆ ಹೊಡೆಯಲು ಹೋದಾಗ ಅವರು ತಪ್ಪಿಸಿಕೊಂಡಾಗ ಆ ಏಟು ಚಾಸಾ.1 ರವರ ಎಡಗೈಗೆ ಮಚ್ಚಿನ ತುದಿ ತಾಗಿ ಗೀಚಿ ಸಾಮಾನ್ಯ ಸ್ವರೂಪದ ರಕ್ತಗಾಯವಾಗಿರುತ್ತದೆ. ಆದ್ದರಿಂದ, 1 ರಿಂದ 3 ನೇ ಆರೋಪಿತರಾದ ನೀವು ಭಾ.ದಂ.ಸಂ.324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 2 ರವರಿಗೆ ನೀವುಗಳು ಇದೇ ಮನೆಯಲ್ಲಿದ್ದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ, 1 ರಿಂದ 3 ನೇ ಆರೋಪಿತರಾದ ನೀವು ಭಾ.ದಂ.ಸಂ.506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 15 ನೇ ಮಾರ್ಚ್ 2025.**

**( ನಾಗಿರೆಡ್ಡಿ.ಎ )**
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.